<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.</u>

ಸಿಸಿ ಸಂಖ್ಯೆಃ 7/2021

ಪಿಡಬ್ಲ್ಯೂಃ 01 ಸಿಡಬ್ಲ್ಯೂ ಃ 01
ದಿನಾಂಕಃ 21.03.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಬಿಬಿಜಾನ ತಿಮ್ಮಾಪುರ |
| ತಂದೆ/ಗಂಡನ ಹೆಸರು | - ಮಹಬೂಬಸಾಬ |
| ವಯಸ್ಸು | - 32 ವರ್ಷ |
| ಉದ್ಯೋಗ | - ಕೂಲಿ |
| ವಾಸ ಸ್ಥಳ | - ತೆಗ್ಗಿಹಳ್ಳಿ |

<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.</u>

ಚಾಸಾ-4 ನನ್ನ ಅಣ್ಣ. ಚಾಸಾ-5 ರಿಂದ 9 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ.

ದಿನಾಂಕಃ 08.10.2019 ರಂದು ನಾನು ನನ್ನ ಮಗನನ್ನು ಪ್ರಭು ದವಾಖಾನೆ ಶಿಗ್ಗಾಂವಿಯಲ್ಲಿ ಅಡಮಿಟ್ ಮಾಡಿದ್ದೇವು. ನನ್ನ ಗಂಡ ಅನ್ವರಸಾಬ ಎನ್ನುವವರಿಗೆ ಹಣ ಬೇಕು ಅಂತಾ ಹೇಳಿದ್ದರು. ನನ್ನ ಗಂಡ ನನಗೆ ಫೋನ್ ಮೂಲಕ ನನಗೆ ಅವರು ಹಣ ತಂದು ಕೊಡುತ್ತಾರೆ ತೆಗೆದುಕೊಂಡು ಬಾ ಡಿಸ್ಚಾರ್ಜ ಮಾಡಿಸಿಕೊಂಡು ಹೋಗೋಣ ಅಂತಾ ಹೇಳಿದರು. ನಾನು ಅನ್ವರ ಇತನಿಗೆ ಫೋನ್ ಮಾಡಿದೆ. ಅವರು ನನಗೆ ಒಂದು ಸಾರಿ ಸವಣೂರಿಗೆ ಬಾ ಅಂತಾ ಹೇಳಿದರು ಮತ್ತೊಂದು ಸಲ ಶಿಗ್ಗಾಂವಿಗೆ ಬಾ ಅಂತಾ ಹೇಳಿದರು. ನಂತರ ಮತ್ತೊಂದು ಸಲ ಹುಬ್ಬಳ್ಳಿಗೆ ಅರ್ಜೆಂಟ್ ಕೆಲಸ ಇದೆ ಹೋಗಿದ್ದೇನೆ ಹುಬ್ಬಳ್ಳಿಗೆ ಬಾ ಅಂತಾ ಹೇಳಿದರು. ನಾನು ಹುಬ್ಬಳ್ಳಿ ಚೆನ್ನಮ್ಮ ಸರ್ಕಲದಲ್ಲಿ ಇರುವ ಸಂಗಮ ಲಾಡ್ಜಗೆ ಅವರು ತಿಳಿಸಿದಂತೆ ಹೋದೆ. ಅಲ್ಲಿ ಆತ ನನಗೆ ಭೇಟಿಯಾಗಿ ಒಂದು ಸಾಕ್ಷಿ ಸಹಿ ಮಾಡುವುದು ಇದೆ ಅಂತಾ ಹೇಳಿ ಕುಡಿಯಲು ನೀರಿನ ಬಾಟಲಿ ಕೊಟ್ಟು ಮೇಲೆ ಹೋದ, ನಾನು ನೀರು ಕುಡಿದೆ. ಮುಂದೆ ನನಗೆ ಏನು ಆಯಿತು ಗೊತ್ತಾಗಲಿಲ್ಲ, ಆದರೆ ಎಚ್ಚರವಾದಾಗ ನನ್ನ ಬಟ್ಟೆಯನ್ನು ಪೂರ್ತಿ ಬಿಚ್ಚಿದ್ದ, ಮತ್ತು ನನ್ನ ಜೊತೆ ಸಂಪರ್ಕ ಮಾಡಿರುವ ವಿಡಿಯೋ ಮಾಡಿಕೊಂಡಿದ್ದ. ಅದನ್ನು ಎಲ್ಲರ ಮೊಬೈಲಗೆ ಬಿಟ್ಟಿದ್ದ. ಅದು ನನಗೆ ಗೊತ್ತಿರಲಿಲ್ಲ. ನಾನು ದೂರು ನೀಡುತ್ತೇನೆ ಅಂತಾ ಹೇಳಿದೆ. ಅದಕ್ಕೆ ನನ್ನ ಅಣ್ಣ ಬೇಡ ಅಂತಾ ಹೇಳಿದ ನಂತರ ನಾನು

ಶಿಗ್ಗಾಂವ ಪೋಲಿಸ್ ಠಾಣೆಯಲ್ಲಿ ಅನ್ವರ ಇತನ ವಿರುದ್ಧ ಈ ಕುರಿತು ದೂರು ನೀಡಿದ್ದೇನೆ. ದಿನಾಂಕಃ 14.11.2019 ರಂದು ದೂರು ನೀಡಿದ್ದೇನೆ. ನನಗೆ ಸದರಿ ವಿಡಿಯೋವನ್ನು ನ್ಯಾಯಾಲಯದ ಮುಂದೆ ಇರುವ ಚಮನಸಾಬ ತೋರಿಸಿದ್ದ. ಆದ್ದರಿಂದ ನಾನು ಪೋಲಿಸರಿಗೆ ಆರೋಪಿಯ ಹೆಸರು ಹೇಳಿದ್ದೆ. ದಿನಾಂಕಃ 17.11.2019 ರಂದು ತೆಗ್ಗಿಹಳ್ಳಿಯಲ್ಲಿ ರಾತ್ರಿ 8.00 ಗಂಟೆಗೆ ಆರೋಪಿ ಮನೆ ಮುಂದೆ ಹಾಯ್ದುಹೋಗುವಾಗ ಆರೋಪಿ ಚಮನಸಾಬ ಕಣವಿ, ಮೌಲಾಸಾಬ ಕಣವಿ, ಫಕ್ರುದ್ದೀನ ಕಣವಿ, ರಿಯಾಜಅಹ್ಮದ ಕಣವಿ ಇವರೆಲ್ಲರೂ ಸೇರಿಕೊಂಡು ಚಮನಸಾಬ ಹೆಸರನ್ನು ಏಕೆ ತೆಗೆದುಕೊಂಡಿ ಅಂತಾ ಹೇಳಿ ನನಗೆ ಹಾದರಗಿತ್ತಿ, ಬೋಸಡಿ ಅಂತಾ ಬೈದರು. ಆಗ ನಾನು ಅವರಿಗೆ ನಾನು ಹೆಸರು ಬರೆಸಿಲ್ಲ, ಮೊಬೈಲನಲ್ಲಿ ವಿಡಿಯೋ ತೋರಿಸಿರುತ್ತಾರೆ ಅಂತಾ ಮಾತ್ರ ಹೇಳಿದ್ದೆ ಅಂತಾ ಹೇಳಿದೆ. ಆದರೆ ಅವರು ನನಗೆ ಮಾತನಾಡಲು ಬಿಡದೇ ನನಗೆ ಹೊಡೆಯುತ್ತಿದ್ದರು. ಅವರು ಹೊಡೆಯುವಾಗ ದಿಲಶಾದಬಾನು ಚಮನಸಾಬ ಕಣವಿ ಬಂದು ಗಂಡು ಮಕ್ಕಳು ಹೊಡೆದರೆ ಕೇಸು ಆಗುತ್ತದೆ ನೀವು ಸರಿರಿ ಅಂತಾ ಹೇಳಿ ಬಂದು ನನಗೆ ಹೊಡೆದಳು. ಅವಳ ಜೊತೆ ನಗೀನಾಬಾನು ಕಣವಿ ಮತ್ತು ಪರ್ವಿನಬಾನು ಕಣವಿ ಅವರು ಸಹ ಹೊಡೆದರು. ದಿಲಶಾದಬಾನು ತಲೆಯ ಕೂದಲು ಹಿಡಿದಿದ್ದಳು, ನಗೀನಾಬಾನು ನನಗೆ ಒದೆಯುತ್ತಿದ್ದಳು, ಪರ್ವಿನಾಬಾನು ದುಬ್ಬಕ್ಕೆ ಹೊಡೆಯುತ್ತಿದ್ದಳು. ಆರೋಪಿ ಚಮನಸಾಬ ನನ್ನನ್ನು ಸುಡಲು ಅಂತಾ ನನ್ನ ಮೇಲೆ ಡಿಸೇಲ್ ಹಾಕಿದ. ಆಗ ಸವಣೂರು ಪೋಲಿಸ್ ಠಾಣೆಯವರು ಸ್ಥಳಕ್ಕೆ ಬಂದರು. ನಂತರ ಅವರು ನನ್ನನ್ನು ಬಿಡಿಸಿಕೊಂಡು ನನ್ನ ತಾಯಿ ಮನೆಗೆ ಬಿಟ್ಟು ಹೋದರು ಮತ್ತು ಮರು ದಿನ ಬಂದು ದೂರು ನೀಡುವಂತೆ ತಿಳಿಸಿದರು.

ನಂತರ ದಿನಾಂಕಃ 18.11.2019 ರಂದು ನಾನು ಸರಕಾರಿ ಆಸ್ಪತ್ರೆಗೆ ಹೊರಟಿದ್ದೆ. ತೆಗ್ಗಿಹಳ್ಳಿ ಬಸ್ ನಿಲ್ದಾದಲ್ಲಿ ಇದ್ದಾಗ ಆರೋಪಿ ಚಮನಸಾಬ ಕಣವಿ ಮತ್ತು ಮೌಲಾಸಾಬ ಕಣವಿ, ಮತ್ತು ಸ್ಕ್ರೆಟರಿ ಬಾಷಾಸಾಬ ಇವರು ಬಂದು ನನಗೆ ಅನ್ವರಸಾಬ ಇತನ ಮೇಲಿನ ಕೇಸು ವಾಪಾಸು ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಜೀವ ಸಹಿತ ಬಿಡುವುದಿಲ್ಲ ಅಂತಾ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಕೆಲಸಕ್ಕೆ ಹೋದಲ್ಲಿ ಸಹ ಆರೋಪಿತರು ನನಗೆ ಹುಡುಕಾಡಿ ಹೊಡೆಯಲು ಪ್ರಯತ್ನಿಸಿರುತ್ತಾರೆ. ಈ ಕುರಿತು ನಾನು ದೂರು ನೀಡಿದ್ದೇನೆ. ನಾನು ಈ ದೂರನ್ನು ಹುಬ್ಬಳ್ಳಿ ಪೋಲಿಸ್ ಠಾಣೆಯಲ್ಲಿ ನೀಡಿದ್ದೇನೆ.

(ಈ ಹಂತದಲ್ಲಿ ಕಡತದಲ್ಲಿ ಮೂಲ ಎಫ್ ಆಯ್ ಆರ್ ಮತ್ತು ಪಿರ್ಯಾದಿ ಇರದೇ ಇರುವುದರಿಂದ ಸ.ಸ.ಅ ರವರು ಮುಂದಿನ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು)

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.